ಎಕರೆಗಟ್ಟಲೇ ಜಮೀನು, ಸ್ವಂತ ಮನೆ, ಅವಿಭಕ್ತ ಕುಟುಂಬ ಎಲ್ಲವೂ ಇದ್ದರೂ ಮದುವೆ ಮಾತ್ರ ಸಾಧ್ಯವಾಗುತ್ತಿಲ್ಲ ಎಂಬ ಕೊರಗು ಅವರದ್ದು.

ಹವ್ಯಕ ಬ್ರಾಹ್ಮಣ ಸಮುದಾಯದ ಅಭಿಷೇಕ್‌ಗೆ ಅದೇ ಸಮುದಾಯದ ಹುಡುಗಿ ಸಿಗುತ್ತಿಲ್ಲ ಎಂಬ ಬೇಸರ. ಅದಕ್ಕೆ ಅನ್ಯಜಾತಿಯಲ್ಲಿ ಸಿಗುತ್ತಾರಾ ಎಂಬ ಹುಡುಕಾಟ. ಹುಡುಗಿಯನ್ನು ನೋಡಿರುವ ಸಂಜಯ್ ಮದುವೆಯಾಗಲು ಸಿದ್ಧ. ಆದರೆ, ಸುಲಭವಾಗಿ ಬಗೆಹರಿಯದ ಷರತ್ತುಗಳು ಆತನ ಮದುವೆಗೆ ಅಡ್ಡಿ. ಆತನಿಗೆ ಮುಕ್ತವಾಗಿ ಹೇಳಿಕೊಂಡರೆ, ಈತನಿಗೆ ಹೇಳಿಕೊಳ್ಳಲು ಮುಜುಗರ. ಈ ಸಮಸ್ಯೆ ಇವರಿಬ್ಬರದ್ದು ಅಷ್ಟೇ ಅಲ್ಲ, ರಾಜ್ಯದ ಬಹುತೇಕ ಯುವಕರದ್ದು. ಬ್ರಾಹ್ಮಣ, ಜೈನ, ರೆಡ್ಡಿ, ಲಿಂಗಾಯತ, ಕ್ರೈಸ್ತ, ಮುಸ್ಲಿಂ ಸೇರಿದಂತೆ ಬಹುತೇಕ ಜಾತಿ, ಧರ್ಮಗಳ ಯುವಜನರಲ್ಲಿ ಈ ಸಮಸ್ಯೆ ಕಾಡುತ್ತಿದೆ.



ಉತ್ತರ ಕನ್ನಡ ಜಿಲ್ಲೆಯಿಂದ ಚಾಮರಾಜನಗರದವರೆಗೆ, ವಿಜಯಪುರದಿಂದ ಮಂಗಳೂರಿನವರೆಗೆ ಈ ಹುಡುಕಾಟ ನಡೆದಿದೆ. ಇದು ಆಯಾ ಪಟ್ಟಣ, ಊರು, ಜಿಲ್ಲೆಗೆ ಸೀಮಿತಗೊಳ್ಳದೇ, ಅಂತರರಾಜ್ಯ ಮಟ್ಟಕ್ಕೂ ವಿಸ್ತರಿಸಿದೆ. ಶೋಧವು ಬಹುತೇಕ ಕಡೆ ಫಲಪ್ರದವಾಗದ ಕಾರಣ ಹಲವರು ಖಿನ್ನತೆಗೆ ಒಳಗಾಗಿದ್ದಾರೆ. ಮದ್ಯವ್ಯಸನಿ ಆಗಿದ್ದಾರೆ. ಆರೋಗ್ಯ ಹಾಳು ಮಾಡಿಕೊಂಡಿದ್ದಾರೆ. ಇನ್ನೂ ಕೆಲವರಂತೂ ಜಗತ್ತಿನ ಗೊಡವೆಯೇ ಬೇಡವೆಂದು ಪ್ರಾಣವನ್ನೂ ಕಳೆದುಕೊಂಡಿದ್ದಾರೆ.

### ಕೆಟ್ಟ ಮನೋಭಾವದ ಪರಿಣಾಮ

'ಹೆಣ್ಣು ಮಗು ಎಂದರೆ ಹೊರೆ, ಅಪಶಕುನ ಎಂಬ ಮನೋಭಾವ ಹಲವು ದಶಕಗಳಿಂದ ಮುಂದುವರದಿದ್ದರ ಪರಿಣಾಮವೇ ಇಂದಿನ ಘೋರ ಪರಿಸ್ಥಿತಿಗೆ ಕಾರಣ. ಹೆಣ್ಣುಮಗುವಿನಿಂದ ಮುಕ್ತಿ ಪಡೆದರೆ ಸಾಕು ಎಂಬ ಮನಸ್ಥಿತಿ ಗಾಢವಾಗಿ ಬೇರೂರಿತ್ತು. ಹೀಗಾಗಿ ಭ್ರೂಣ ಹತ್ಯೆ ನಡೆದವು. ಈಗಲೂ ಅಗಾಗ ವರದಿಯಾಗುತ್ತಲೇ ಇರುತ್ತವೆ. ಅದರ ಫಲಿತಾಂಶ ನಮ್ಮ ಕಣ್ಣೆದುರು ಇದೆ. ನಮ್ಮ ಮಕ್ಕಳಿಗೆ ಮದುವೆಯಾಗಲು ಹೆಣ್ಣು ಸಿಗುತ್ತಿಲ್ಲ' ಎಂದು ಹುಬ್ಬಳ್ಳಿಯ ಸುಶೀಲಾಬಾಯಿ ನೋವು ತೋಡಿಕೊಂಡರು. ಅವರು ತಮ್ಮ ಮಗನಿಗಾಗಿ ಎರಡು ವರ್ಷಗಳಿಂದ ಹುಡುಗಿಯ ಹುಡುಕಾಟದಲ್ಲಿ ನಿರತರಾಗಿದ್ದಾರೆ.



ಅವರು ಹೇಳಿದ್ದರಲ್ಲಿ ತಪ್ಪೇನೂ ಇಲ್ಲ. 2011ರ ಜನಗಣತಿ ಪ್ರಕಾರ, ದೇಶದಲ್ಲಿ ಅಲ್ಲದೇ ರಾಜ್ಯದಲ್ಲೂ ಲಿಂಗಾನುಪಾತ ಕುಸಿಯುತ್ತಿದೆ. ದೇಶದಲ್ಲಿ 1000 ಪುರುಷರಿದ್ದರೆ, ಮಹಿಳೆಯರ ಸಂಖ್ಯೆ 943. ಕರ್ನಾಟಕದಲ್ಲಿ 1000 ಪುರುಷರಿದ್ದರೆ, ಮಹಿಳೆಯರ ಸಂಖ್ಯೆ 973. ಒಟ್ಟು ಲೆಕ್ಕಾಚಾರ ಹಾಕಿದರೆ, ರಾಜ್ಯದಲ್ಲಿ 3.10 ಕೋಟಿ ಪುರುಷರಿಗೆ 3.01 ಮಹಿಳೆಯರು ಇದ್ದಾರೆ. ವರ್ಷಗಳಿಂದ ಇದೇ ರೀತಿ ಅಂಕಿ ಅಂಶಗಳು ಮುಂದುವರೆದಿವೆ ಹೊರತು ಭಾರಿ ವ್ಯತ್ಯಾಸ ಆಗಿಲ್ಲ.

ಹೆಣ್ಣಿಗಾಗಿ ಹುಡುಕಾಟ ಎಲ್ಲಿಗೆ ಬಂದು ತಲುಪಿದೆಯೆಂದರೆ, ದೇವರಿಗೆ ನಿತ್ಯ ಮೊರೆ ಇಡಬೇಕಿದೆ. ಪಾದಯಾತ್ರೆ ಮಾಡಬೇಕಿದೆ. ಸ್ವಾಮೀಜಿಗಳು–ಮಠಾಧೀಶರ ಬಳಿ ತೆರಳಿ ಪ್ರಾರ್ಥಿಸಬೇಕಿದೆ. ಹರಕೆ ಹೊತ್ತ ನಂತರವೂ ಮತ್ತು ವ್ರತ ಪಾಲಿಸಿದ ಬಳಿಕವೂ ಬೇಡಿಕೆ ಈಡೇರದಿದ್ದಾಗ, ಸಮಾಜದ ಪ್ರಮುಖರು ಮತ್ತು ಪ್ರತಿಷ್ಠಿತ ವ್ಯಕ್ತಿಗಳ ಎದುರು ಸಂಕಷ್ಟ ಹೇಳಿಕೊಳ್ಳಬೇಕಾದ ಸ್ಥಿತಿ ಇದೆ. ಇದ್ಯಾವುದರ ಉಸಾಬರಿಯೇ ಬೇಡವೆಂದು, ಕೆಲವರು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸರ್ಕಾರಿ ಜನಸ್ಪಂದನ ಸಭೆಯಲ್ಲಿ 'ನನಗೆ ಒಂದು ಹೆಣ್ಣು ಹುಡುಕಿಕೊಡಿ' ಎಂದು ಅರ್ಜಿ ಸಲ್ಲಿಸಿದ್ದು ಆಗಿದೆ.

ಇಷ್ಟೆಲ್ಲಾ ಸಮಸ್ಯೆ ಸವಾಲು ಎದುರಿಸುವುದೇ ಬೇಡವೆಂದು ಕೆಲವರು ಅಂತರ್ಜಾತಿ ಮದುವೆ ಮಾಡಿಕೊಳ್ಳತೊಡಗಿದ್ದಾರೆ. ಬೇರೆ ಜಾತಿಯವರು ಕೊಡದಿದ್ದಾಗ, ಸರ್ಕಾರಿ ಅನಾಥಾಲಯಗಳಲ್ಲಿ ಇರುವ ಯುವತಿಯರನ್ನೇ ಮದುವೆ ಆಗುತ್ತಾರೆ. ಆಕೆಯ ಕೌಟುಂಬಿಕ ಹಿನ್ನಲೆ, ಜಾತಿ, ಕುಲ, ಗೋತ್ರ, ನಕ್ಷತ್ರ ಅದು–ಇದು ಎಲ್ಲವೂ ಅಲ್ಲಿ

## ಷರತ್ತು, ಕಟ್ಟುಪಾಡು, ಆಸ್ತಿ, ಲೆಕ್ಕಾಚಾರ...

ಮೊದಲೆಲ್ಲ ಮಗಳನ್ನು ಮದುವೆ ಮಾಡಿಕೊಟ್ಟರೆ ಸಾಕು ಎಂದು ಪೋಷಕರು ಯೋಚಿಸುತ್ತಿದ್ದರು. ಅದಕ್ಕಾಗಿ ಆಕೆ ವಯಸ್ಸಿಗೆ ಬಂದ ಕೂಡಲೇ, ಮದುವೆಗೆ ಸಿದ್ಧತೆ ಮಾಡಿಕೊಡುತ್ತಿದ್ದರು. ಲಕ್ಷಾಂತರ ರೂಪಾಯಿ ಖರ್ಚಾದರೂ ಪರವಾಗಿಲ್ಲ, ಇಂತಿಷ್ಟು ವರದಕ್ಷಿಣೆ ಕೊಟ್ಟರೂ ಚಿಂತೆಯಿಲ್ಲ ಎಂದು ಮದುವೆ ಮಾಡಿಬಿಡುತ್ತಿದ್ದರು. ಆದರೆ, ಈಗ ಪರಿಸ್ಥಿತಿ ಬದಲಾಗಿದೆ.

ಸದ್ಯಕ್ಕೆ ಹುಡುಗಿಯರದ್ದೇ ಮೇಲುಗೈ. ಕುಟುಂಬದಲ್ಲಿ ಒಬ್ಬನೇ ಇರುವ ಮಗನನ್ನು ಮದುವೆಯಾಗಲು ಬಯಸುತ್ತಾರೆ. ಮನೆಯಲ್ಲಿ ಅತ್ತೆ–ಮಾವ ಇರಬಾರದು. ಇದ್ದರೂ ತುಟಿಕ್ ಪಿಟಿಕ್ ಅನ್ನಬಾರದು. ಕಿರಿಕಿರಿಯಂತಹ ಪರಿಸ್ಥಿತಿ ಉದ್ಭವಿಸಿದರೆ, 'ಗಂಡ ಮತ್ತು ಮಕ್ಕಳಷ್ಟೇ ನನ್ನ ಕುಟುಂಬ. ನೀವು ನಮಗೆ ಸಂಬಂಧವಿಲ್ಲ' ಎಂದು ಧ್ವನಿ ಎತ್ತುತ್ತಾರೆ. ಮನೆಯಲ್ಲಿ ಕೆಲಸ ಹೆಚ್ಚು ಹಚ್ಚಬಾರದು. ಅದು–ಇದು ಎಂದು ಪ್ರಶ್ನಿಸಬಾರದು ಎಂಬ ಷರತ್ತಿಗೆ ಮದುವೆಗೂ ಮೊದಲೇ ಒಪ್ಪಿಗೆ ಪಡೆದಿರುತ್ತಾರೆ.

'ಅತ್ತೆ–ಮಾವ ಇದ್ದಲ್ಲಿ, ಕಿರಿಕಿರಿ ಜಾಸ್ತಿ. ನೇರವಾಗಿ